# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಶಿವಾಜಿನಗರ ಉಪವಿಭಾಗ ಹಲಸೂರು ಕೆರೆರಸ್ತೆ, ಬೆಂಗಳೂರು-42**

---

ಸಂಖ್ಯೆ:ಸ.ಇಂ/ವಾ-91/ವಾರ್ಡ್‌ಸಭೆ/10/2022-23 ದಿನಾಂಕ:01-10-2022

**ವಾರ್ಡ್-91 ರ ವಾರ್ಡ್ ಸಭೆಯ ನಡವಳಿ**

ದಿನಾಂಕ: 01-10-2022 ರಂದು ಶಿವಾಜಿನಗರ ಉಪ ವಿಭಾಗ ವಾರ್ಡ್-91, ಭಾರತಿನಗರ ವಾರ್ಡ್ ಕಛೇರಿಯಲ್ಲಿ ಶ್ರೀ.ಪದ್ಮರಾಜ್, ವಾರ್ಡ್-91 ರ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿ.

**ಹಾಜರಿದ್ದವರು:**

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಪದನಾಮ / ಇಲಾಖೆ |
|---|---|---|
| 1 | ಶ್ರೀ ಪದ್ಮರಾಜ್ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಯೋಜನೆ ಪೂರ್ವ) ಹಾಗೂ ನೋಡಲ್ ಅಧಿಕಾರಿ ವಾರ್ಡ್-91 |
| 2 | ಶ್ರೀ ಪ್ರವೀಣ್.ಎನ್.ಎಂ, | ಸಇ ಹಾಗೂ ಕಾರ್ಯದರ್ಶಿ ಮತ್ತು ಸಂಚಾಲಕರು ವಾರ್ಡ್ ಸಂಖ್ಯೆ:91 |
| 3 | ಶ್ರೀ ಸತೀಶ್ | ಕಂದಾಯ ಪರಿವೀಕ್ಷಕರು |
| 4 | ಶ್ರೀ ಕಾರ್ತಿಕ್ | ಕಿರಿಯ ಆರೋಗ್ಯ ಪರಿವೀಕ್ಷಕರು |

**ಮಾನ್ಯ ನೋಡಲ್ ಅಧಿಕಾರಿರವರು ಸ್ವಾಗತದೊಂದಿಗೆ ಅಧಿಕಾರಿಗಳ / ಹಾಜರಿದ್ದವರ ಪರಸ್ಪರ ಪರಿಚಯದೊಂದಿಗೆ ಸಭೆಯನ್ನು ಪ್ರಾರಂಬಿಸಲಾಯಿತು.**

- ವಾರ್ಡ್‌ವಾರು ಪ್ರದೇಶದ ಸ್ಥಳಗಳಲ್ಲಿ ಸೊಳ್ಳೆ ನಿಯಂತ್ರಣ ಔಷಧಿಯನ್ನು ಸಿಂಪಡಿಸಲು ಸಭೆಯ ಗಮನಕ್ಕೆ ತಂದಿರುತ್ತಾರೆ, ಈ ಬಗ್ಗೆ ಚರ್ಚಿಸಲಾಗಿ ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಆರೋಗ್ಯ ನಿರೀಕ್ಷಕರಿಗೆ ವಾರ್ಡ್ ಪ್ರದೇಶದ ಆಯ್ದ ಸ್ಥಳಗಳಲ್ಲಿ ಔಷಧಿ ಸಿಂಪಡಿಸಲು ಸೂಚಿಸಿರುತ್ತಾರೆ ಮತ್ತು ರಸೆಲ್ ಮಾರುಕಟ್ಟೆ ಒಳಾಂಗಣದಲ್ಲಿರುವ ಅನುಪಯುಕ್ತ ವಸ್ತುಗಳನ್ನು ತೆರವುಗೊಳಿಸಿ ಸ್ವಚ್ಛಗೊಳಿಸಲು ಸಭಾ ಗಮನಕ್ಕೆ ತರಲಾಗಿ ಈ ಬಗ್ಗೆ ಚರ್ಚಿಸಲಾಗಿ ಹಾಜರಿದ್ದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ರವರಿಗೆ ಕ್ರಮವಹಿಸಲು ತಿಳಿಸಿರುತ್ತಾರೆ.
- ವಾರ್ಡ್ ಪ್ರದೇಶದ ರಸ್ತೆಗಳಲ್ಲಿ ಮತ್ತು ಪಾದಚಾರಿ ರಸ್ತೆಗಳಲ್ಲಿ ಮಣ್ಣು ಮತ್ತು ಅನುಪಯುಕ್ತ ಡೆಬ್ರೀಸ್‌ನ್ನು ರಾತ್ರಿ ಹೊತ್ತಿನಲ್ಲಿ ಸುರಿಯುತ್ತಿದ್ದು, ಇದರಿಂದ ಸಾರ್ವಜನಿಕರಿಗೆ ಹಾಗೂ ಪಾದಚಾರಿಗಳಿಗೆ ಒಡಾಡಲು ತುಂಬಾ ತೊಂದರೆಯುಂಟಾಗುತ್ತಿರುತ್ತದೆ, ಆದುದರಿಂದ ಸದರಿ ಮಣ್ಣು ಮತ್ತು ಅನುಪಯುಕ್ತ ಡೆಬ್ರೀಸನ್ನು ತೆರವುಗೊಳಸಲು ಅವಶ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ. ಈ ಸಂಬಂಧ ಸಭೆಯಲ್ಲಿ ಹಾಜರಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರರು ಮಾತನಾಡುತ್ತಾ, ಸದರಿ ವಿಷಯದ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿರುತ್ತಾರೆ.
- ಮೇಮೋರಿಯಲ್ ಪಾರ್ಕ್ ಅನ್ನು ಸೂಕ್ತ ರೀತಿಯಲ್ಲಿ ನಿರ್ವಹಣಾ ಕಾರ್ಯವನ್ನು ನಿರ್ವಹಿಸಲು ತೋಟಗಾರಿಕಾ ಇಲಾಖೆರವರಿಗೆ ತಿಳಸಲು ಸೂಚಿಸಿರುತ್ತಾರೆ.

**(ಅಧೀಕ್ಷಕ, ತೋಟಗಾರಿಕ ಇಲಾಖೆ)**

- ಮಳೆಯಿಂದ ಹಾನಿಗೊಳಗಾಗುವ ಪ್ರದೇಶವನ್ನು ತುರ್ತಾಗಿ ಸರಿಪಡಿಸಲು ಕ್ರಮವಹಿಸಲು ತಿಳಿಸಿರುತ್ತಾರೆ.
- ರಸಲ್ ಮಾರ್ಕೇಟ್‌ನ ಮೊದಲನೆ ಮಹಡಿಯಲ್ಲಿ ತರಕಾರಿ ವ್ಯಾಪಾರಿಯವರು ಉಳಿದಿರುವ ತರಕಾರಿಯನ್ನು ಹಾಗೆಯೇ ಮಾರುಕಟ್ಟೆಯಲ್ಲಿ ಬಿಟ್ಟುಹೋಗುತ್ತಿರುವುದರಿಂದ ಕಸ ಕೊಳೆತು ಹೋಗಿ ಸಮರ್ಪಕವಾಗಿ ಕಸ ವಿಲೇವಾರಿ ಯಾಗದೆ ವಾಸನೆ ಉಂಟಾಗುತ್ತಿದ್ದು, ಅದರಿಂದ ವ್ಯಾಪಾರಿಗಳಿಗೆ ವ್ಯಾಪಾರ ಮಾಡಲು ತುಂಬಾ ತೊಂದರೆಯಾಗುತ್ತಿದೆ ಎಂದು ಆದುದರಿಂದ ಇದರ ಬಗ್ಗೆ ಕ್ರಮವಹಿಸಲು ನೋಡಲ್ ಅಧಿಕಾರಿರವರು ಸೂಚಿಸಿರುತ್ತಾರೆ

**ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ ಶಿವಾಜಿನಗರ)**

- <u>**ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಗೆ ಸಂಬಂಧಿಸಿದಂತೆ:-**</u> ಸ್ಯಾನಿಟರಿ ಚೇಂಬರ್‌ಗಳಿಂದ ಮೇಲೆತ್ತುವ ಹೂಳನ್ನು ಸೂಕ್ತ ರೀತಿಯಲ್ಲಿ ಸಕಾಲದಲ್ಲಿ ವಿಲೇವಾರಿ ಮಾಡುವಂತೆ ಹಾಗೂ ರಸ್ತೆಗಿಂತ ಎತ್ತರ ಅಥವಾ ತಗ್ಗಿನಲ್ಲಿರುವ ಸ್ಯಾನಿಟರಿ ಚೇಂಬರ್‌ಗಳಿದ್ದರೆ ಶೀಘ್ರವಾಗಿ ರಸ್ತೆ ಮಟ್ಟಕ್ಕೆ ಸರಿಪಡಿಸುವಂತೆ ಹಾಜರಿದ್ದ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಸಹಾಯಕ ಇಂಜಿನಿಯರ್ ರವರಿಗೆ ಸೂಚಿಸಿದರು.

- ಸ್ಮಾರ್ಟ್ ಸಿಟಿ ಕೆಲಸವು ರಸಲ್ ಮಾರ್ಕೇಟ್ ಸುತ್ತಮುತ್ತ ಪ್ರಗತಿಯಲ್ಲಿದ್ದು ಶೀಘ್ರವಾಗಿ ಕಾಮಗಾರಿಯನ್ನು ಮುಗಿಸಲು ಸಾರ್ವಜನಿಕರಿಂದ ದೂರು ಬಂದಿದ್ದು ಸಂಬಂಧಪಟ್ಟವರಿಗೆ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.

**(ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಂಗಳೂರು ಸ್ಮಾರ್ಟ್ ಸಿಟಿ ಲಿ.ಟಿ)**

- ನಗರೋತ್ಥಾನ 2020-21 ನೇ ಸಾಲಿನ ಕಾಮಗಾರಿಯು ಪ್ರಗತಿಯಲ್ಲಿದ್ದು ಸಂಬಂಧಪಟ್ಟ ಗುತ್ತಿಗೆದಾರರು ಕೆಲಸವನ್ನು ತ್ವರಿತವಾಗಿ ಮುಗಿಸಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ಅನುವುಮಾಡಿಕೊಡಲು ನೋಡಲ್ ಅಧಿಕಾರಿರವರು ಮಾತಾನಡುತ್ತ ಸಹಾಯಕ ಅಭಿಯಂತರರಿಗೆ ಸಂಬಂಧಪಟ್ಟ ಗುತ್ತಿಗೆದಾರರಿಗೆ ತಿಳಿಸಲು ಸೂಚಿಸಿರುತ್ತಾರೆ.

- ವಾರ್ಡಿನಲ್ಲಿ ತಳ್ಳುವ ಗಾಡಿಗಳ ಕೊರತೆ ಇದ್ದು, ಸರಿಯಾಗಿ ಕಸ ವಿಲೇವಾರಿಯಾಗುತಿಲ್ಲದಿರುವುದು ಕಂಡು ಬಂದಿದ್ದು ಇದರ ಬಗ್ಗೆ ಸಾರ್ವಜನಿಕರಿಂದ ಸಾಕಷ್ಟು ದೂರು ಬಂದಿರುತ್ತದೆ ಹಾಗೂ ಪೌರಕಾರ್ಮಿಕರನ್ನು ವಿಚಾರಿಸಿದ್ದಲ್ಲಿ ಅವರಿಗೆ ತಳ್ಳುವ ಗಾಡಿ (Push Cart) ಕೊರತೆ ಇದ್ದು ಆದಷ್ಟು ಬೇಗ ಇವರಿಗೆ ತಳ್ಳುವ ಗಾಡಿ (Push Cart) ನೀಡಲು ಸೂಚಿಸಿದೆ.

<u>**ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ ಶಿವಾಜಿನಗರ)**</u>

- OFC Cable ಗಳನ್ನು ಕತ್ತರಿಸಿ ಹಾಗೆಯೇ ಬಿಟ್ಟಿರುವುದರಿಂದ ಫುಟ್‌ಪಾತ್ ಮೇಲೆ ಬಿದ್ದಿರುತ್ತದೆ. ಆದುದರಿಂದ ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗುತ್ತಿರುವುದರಿಂದ ರಸ್ತೆಯಲ್ಲಿ ಬಿದ್ದಿರುವ ಔಈಅ ಅಚಿಛಟಜ ಗಳನ್ನು ಶೀಘ್ರಗತಿಯಲ್ಲಿ ತೆರವುಗೊಳಸಲು ಸೂಚಿಸಿರುತ್ತಾರೆ.

<u>**ಸಹಾಯಕ ಕಾರ್ಯಪಾಲಕ ಅಭಿಯಂತರರು (ಶಿವಾಜಿನಗರ ಉಪ ವಿಭಾಗ)**</u>

- ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಸಕಾದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಂಡು ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು ಹಾಗು ಹಾಜರಿದ್ದ ಸಾರ್ವಜನಿಕರಿಗೆ ಕಸ ವಿಲೇವಾರಿ ಬಗ್ಗೆ ಆದಷ್ಟು ಗಮನವಹಿಸಿ ಸಹಕರಿಸಿದಲ್ಲಿ ದಿನನಿತ್ಯದ ಕಸ ವಿಲೇವಾರಿ ಸಮಯದಲ್ಲಿ ಸಮರ್ಪಕವಾಗಿ ನಿರ್ವಹಿಸಲು ಗುತ್ತಿಗೆದಾರರು ಸಹಾಯವಾಗುತ್ತದೆ.

ಕಾರ್ಯದರ್ಶಿಯವರು ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸುತ್ತಾ ಮೇಲೆ ತಿಳಿಸಿರುವ ಎಲ್ಲಾ ಆಕ್ಷೇಪಣೆಗಳನ್ನು ಸಂಬಂಧಪಟ್ಟ ಇಲಾಖೆರವರಿಗೆ ತಿಳಿಸಿ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.

ನೋಡಲ್ ಅಧಿಕಾರಿರವರ ಸೂಚನೆಗಳಂತೆ ನಡವಳಿಗಳನ್ನು ತಯಾರಿಸಿ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಲು ಸೂಚಿಸಿರುತ್ತಾರೆ.

(ಪ್ರವೀಣ್.ಎನ್.ಎಂ)
**ಸ.ಅ&ಕಾರ್ಯದರ್ಶಿ**
**ವಾರ್ಡ್-91, ಭಾರತಿನಗರ**